# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 477
**ಸದಸ್ಯರ ಹೆಸರು** : ಶ್ರೀ ಡಿ.ಎಸ್. ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 15.09.2022
**ಉತ್ತರಿಸುವ ಸಚಿವರು** : ಗೃಹ ಸಚಿವರು

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ | ಇತ್ತೀಚೆಗೆ ಎಸ್.ಡಿ.ಪಿ.ಐನ ಕಾರ್ಯಕರ್ತರು ಎಂದು ಹೇಳಿಕೊಳ್ಳುವವರು ಸಾವರ್ಕರ್ ಅವರ ಫೋಟೋವನ್ನು (ಭಾವಚಿತ್ರ) ತೆಗೆಸುವ ಮೂಲಕ ಶಿವಮೊಗ್ಗ ಭಾಗದಲ್ಲಿ ಅಶಾಂತಿ ಸೃಷ್ಟಿಸಲು ಮುಂದಾಗಿರುವುದು ಸರಿಯೇ; | ಈ ವಿಷಯದ ಕುರಿತು ಪ್ರಕರಣ ಸಂಖ್ಯೆ 338/2022 ಕಲಂ 153 (ಎ) ಸಹಿತ 34 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿದ್ದು, ಪ್ರಕರಣ ತನಿಖೆಯಲ್ಲಿರುತ್ತದೆ. |
| ಆ | ಶಿವಮೊಗ್ಗದಲ್ಲಿ ಈ ತರಹದ ಘಟನೆಗಳು ಹಾಗೂ ಕೋಮು ಗಲಭೆಗಳು ನಡೆಯದಂತೆ ಸರ್ಕಾರ ಕೈಗೊಂಡ ಕ್ರಮಗಳೇನು; | **ಕೋಮು ಗಲಭೆಗಳು ನಡೆಯದಂತೆ ಸರ್ಕಾರ ಕೈಗೊಂಡ ಕ್ರಮಗಳು:**<br>1. ಪ್ರಕರಣದ ಆರೋಪಿಗಳನ್ನು ಪತ್ತೆ ಹಚ್ಚಿ ಕಾನೂನು ರೀತ್ಯಾ ಕ್ರಮಕೈಗೊಂಡು, ಆರೋಪಿತರ ವಿರುದ್ಧ ರೌಡಿ ಹಾಳೆ, ಮತೀಯ ಗೂಂಡಾ ಹಾಳೆಗಳನ್ನು ತೆರೆಯಲಾಗುತ್ತಿದೆ.<br>2. ಮುಂಜಾಗ್ರತಾ ಕ್ರಮದಡಿಯಲ್ಲಿ ಪ್ರಕರಣ ದಾಖಲಿಸಿ, ಅವರ ಮೇಲೆ ನಿಗಾವಹಿಸಲಾಗಿರುತ್ತದೆ.<br>3. ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವನಿಟ್ಟಿನಲ್ಲಿ ಪ್ರಮುಖ ಹಬ್ಬ ಹರಿದಿನ ಆಚರಣೆ ಮುಂಚಿತವಾಗಿ ಶಾಂತಿ ಸಮಿತಿ ಸಭೆಗಳನ್ನು ನಡೆಸಿ, ಹಬ್ಬಗಳನ್ನು ಶಾಂತ ರೀತಿಯಿಂದ ಆಚರಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗುತ್ತಿದೆ.<br>4. ಪ್ರಮುಖ ಧಾರ್ಮಿಕ, ರಾಜಕೀಯ ಕಾರ್ಯಕ್ರಮಗಳು ನಡೆಯುವ ಸಮಯದಲ್ಲಿ ಸೂಕ್ತ ಬಂದೋಬಸ್ತ್ ನಿಯೋಜಿಸಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಾಗುತ್ತಿದೆ.<br>5. ಪ್ರಕರಣಗಳಲ್ಲಿ ಭಾಗಿಯಾಗುವವರ ಮೇಲೆ ಆಗಿಂದಾಗ್ಗೆ ಭದ್ರತಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಾಂಡ್ ಮುಚ್ಚಳಿಕೆ ಪಡೆಯಲಾಗುತ್ತಿದೆ.<br>6. ಹೆಚ್ಚಿನ ಪ್ರಕರಣಗಳಲ್ಲಿ ಭಾಗವಹಿಸಿದ ಆರೋಪಿಗಳ ಮೇಲೆ ಗಡಿಪಾರು/ಗೂಂಡಾ ಕಾಯ್ದೆಯಡಿ ಕ್ರಮ ವಹಿಸಲಾಗುತ್ತಿದೆ. |
| ಇ | ರಾಜ್ಯದಲ್ಲಿ ಕಳೆದ 15 ವರ್ಷದಲ್ಲಿ ಆಗಿರುವ ಕೋಮು ಗಲಭೆಗಳೆಷ್ಟು; ಕೋಮು ಗಲಭೆಯಲ್ಲಿ ಭಾಗಿಯಾದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು? | ರಾಜ್ಯದಲ್ಲಿ ಕಳೆದ 15 ವರ್ಷಗಳಲ್ಲಿ ದಾಖಲಾದ ಕೋಮು ಗಲಭೆ ಪ್ರಕರಣಗಳ ಸಂಖ್ಯಾವಾರು ವಿವರವನ್ನು **ಅನುಬಂಧದಲ್ಲಿ** ಲಗತ್ತಿಸಿದೆ.<br>**ಕೋಮು ಗಲಭೆಯಲ್ಲಿ ಭಾಗಿಯಾದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮ**<br>➢ ಕೋಮು ಗಲಭೆ ಪ್ರಕರಣಗಳಲ್ಲಿ ಭಾಗಿಯಾದವರ ವಿರುದ್ಧ ಸೂಕ್ತ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು.<br>➢ ಕೋಮು ಗಲಭೆ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿತರುಗಳ ಹಾಗೂ |

| | | |
|---|---|---|
| | | ಮತೀಯ ವಿಷಯವನ್ನಿಟ್ಟುಕೊಂಡು ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವ ವ್ಯಕ್ತಿಗಳ ವಿರುದ್ಧ ಮತೀಯ ಗೂಂಡಾ (Communal Goonda) ರಿಜಿಸ್ಟರ್ ಅನ್ನು ತೆರೆದು ಅವರ ಚಲನ-ವಲನಗಳ ಮೇಲೆ ನಿರಂತರ ನಿಗಾವಣೆ ವಹಿಸಲಾಗಿರುತ್ತದೆ.<br>➢ ಮತೀಯ ಸೂಕ್ಷ್ಮ ಹಬ್ಬ ಆಚರಣೆಗಳಾದ ಬಕ್ರೀದ್, ಈದ್-ಮಿಲಾದ್, ರಂಜಾನ್, ಗಣೇಶ ಚತುರ್ಥಿ, ಕ್ರಿಸ್‌ಮಸ್, ದತ್ತಮಾಲಾ ಅಭಿಯಾನ, ದತ್ತಜಯಂತಿ ಹಾಗೂ ಇತರೆ ಪ್ರಮುಖ ಆಚರಣೆಗಳ ಕಾಲಕ್ಕೆ ಮಾಹಿತಿ ಸಂಗ್ರಹಿಸಿ ಮತೀಯ ಗೂಂಡಾ ಹಾಗೂ ಮತೀಯ ಭಾವನೆ ಹೊಂದಿರುವ ವ್ಯಕ್ತಿಗಳ ವಿರುದ್ಧ ಮುಂಜಾಗ್ರತಾ ಕ್ರಮವಾಗಿ ಭದ್ರತಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಮುಂಜಾಗ್ರತವಾಗಿ ಕಲಂ: 107, 108, 109, 110, 145 ಸಿಆರ್‌ಪಿಸಿ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br>➢ ಪ್ರಕರಣಗಳಲ್ಲಿ ಭಾಗಿಯಾಗುವವರ ಮೇಲೆ ಆಗಿಂದಾಗ್ಗೆ ಭದ್ರತಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಾಂಡ್ ಮುಚ್ಚಳಿಕೆ ಪಡೆಯಲಾಗುತ್ತಿದೆ.<br>➢ ಹೆಚ್ಚಿನ ಪ್ರಕರಣಗಳಲ್ಲಿ ಭಾಗವಹಿಸಿದ ಆರೋಪಿಗಳ ಮೇಲೆ ಗಡಿಪಾರು/ಗೂಂಡಾ ಕಾಯ್ದೆಯಡಿ ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 83 ಪಿಸಿಇ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

| SN | UNIT | ಕೋಮು ಗಲಭೆ ಪ್ರಕರಣಗಳ ಅಂಕಿ-ಅಂಶಗಳು | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | 2007 | 2008 | 2009 | 2010 | 2011 | 2012 | 2013 | 2014 | 2015 | 2016 | 2017 | 2018 | 2019 | 2020 | 2021 | 2022 |
| 1 | Bengaluru City | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 2 | Mysuru City | 0 | 0 | 2 | 0 | 0 | 0 | 0 | 0 | 0 | 1 | 0 | 0 | 0 | 0 | 0 | 0 |
| 3 | Hubbali-Dharwad | 0 | 0 | 0 | 0 | 0 | 0 | 3 | 1 | 2 | 0 | 0 | 0 | 0 | 0 | 1 | 1 |
| 4 | Mangaluru City | 0 | 1 | 1 | 0 | 0 | 0 | 1 | 5 | 6 | 3 | 1 | 2 | 0 | 0 | 0 | 0 |
| 5 | Belagavi City | 0 | 0 | 0 | 1 | 2 | 7 | 4 | 4 | 29 | 6 | 9 | 5 | 0 | 0 | 4 | 0 |
| 6 | Kalaburgi City | 0 | 0 | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 |
| 7 | Bangalore District | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 8 | Tumkur | 3 | 0 | 15 | 4 | 5 | 1 | 8 | 4 | 2 | 1 | 5 | 0 | 0 | 0 | 7 | 0 |
| 9 | Kolar | 0 | 0 | 0 | 0 | 5 | 0 | 0 | 0 | 0 | 0 | 0 | 4 | 2 | 0 | 0 | 4 |
| 10 | Chikkaballapur | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 11 | Ramanagar | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 12 | K.G.F. | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 13 | Mysuru Dist. | 0 | 0 | 0 | 0 | 0 | 0 | 3 | 0 | 5 | 0 | 0 | 0 | 0 | 0 | 0 | 0 |
| 14 | Chamarajnagar | 0 | 0 | 0 | 0 | 0 | 0 | 0 | 0 | 1 | 1 | 0 | 0 | 0 | 0 | 0 | 0 |
| 15 | Kodagu | 4 | 5 | 0 | 0 | 0 | 0 | 0 | 0 | 45 | 6 | 2 | 0 | 0 | 0 | 5 | 5 |
| 16 | Mandya | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 17 | Hassan | 0 | 0 | 0 | 46 | 0 | 2 | 0 | 13 | 0 | 0 | 0 | 0 | 0 | 0 | 0 | 0 |
| 18 | Davangere | 0 | 5 | 0 | 15 | 2 | 2 | 0 | 0 | 10 | 0 | 0 | 0 | 0 | 0 | 2 | 16 |
| 19 | Chitradurga | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 20 | Shivamogga | 0 | 0 | 0 | 180 | 0 | 0 | 4 | 0 | 80 | 0 | 0 | 0 | 0 | 15 | 0 | 42 |
| 21 | Haveri | 0 | 0 | 0 | 0 | 2 | 0 | 3 | 1 | 3 | 2 | 4 | 5 | 4 | 3 | 2 | 0 |
| 22 | Belagavi Dist. | 1 | 1 | 8 | 0 | 1 | 0 | 0 | 2 | 33 | 5 | 0 | 4 | 0 | 1 | 0 | 0 |
| 23 | Dharwad | 0 | 2 | 0 | 0 | 0 | 2 | 0 | 2 | 0 | 2 | 0 | 0 | 1 | 0 | 0 | 1 |
| 24 | Vijayapura | 0 | 0 | 0 | 0 | 0 | 0 | 1 | 16 | 1 | 0 | 0 | 0 | 0 | 0 | 0 | 0 |
| 25 | Gadag | 0 | 0 | 0 | 0 | 2 | 0 | 2 | 0 | 0 | 0 | 0 | 0 | 0 | 0 | 2 | 3 |
| 26 | Bagalkot | 8 | 0 | 0 | 0 | 0 | 2 | 3 | 1 | 28 | 2 | 4 | 0 | 0 | 0 | 6 | 16 |
| 27 | Dakshina Kannada | 51 | 13 | 39 | 0 | 0 | 24 | 0 | 29 | 66 | 0 | 36 | 0 | 0 | 0 | 3 | 7 |
| 28 | Udupi | 12 | 1 | 3 | 22 | 0 | 8 | 6 | 8 | 6 | 0 | 3 | 3 | 1 | 0 | 0 | 0 |
| 29 | Uttara Kannada | 0 | 0 | 7 | 4 | 2 | 0 | 0 | 0 | 2 | 1 | 66 | 0 | 0 | 0 | 0 | 0 |
| 30 | Chickmagalur | 0 | 0 | 0 | 1 | 3 | 0 | 9 | 3 | 5 | 3 | 4 | 2 | 2 | 0 | 0 | 0 |
| 31 | Kalaburgi | 0 | 1 | 0 | 0 | 0 | 1 | 0 | 1 | 1 | 1 | 2 | 1 | 3 | 0 | 0 | 1 |
| 32 | Bidar | 0 | 0 | 0 | 6 | 0 | 0 | 2 | 2 | 2 | 9 | 0 | 2 | 0 | 0 | 0 | 0 |
| 33 | Yadgiri | 0 | 0 | 0 | 0 | 0 | 0 | 1 | 1 | 0 | 0 | 1 | 0 | 0 | 0 | 0 | 0 |
| 34 | Bellari | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 35 | Koppal | 1 | 0 | 0 | 0 | 0 | 1 | 0 | 0 | 1 | 1 | 0 | 0 | 0 | 0 | 0 | 0 |
| 36 | Raichur | 0 | 0 | 0 | 0 | 0 | 3 | 2 | 0 | 1 | 0 | 0 | 0 | 1 | 0 | 0 | 0 |
| 37 | Vijayanagara | 0 | 0 | 0 | 0 | 0 | 1 | 0 | 1 | 7 | 2 | 0 | 4 | 2 | 0 | 0 | 0 |
| | **TOTAL** | **80** | **29** | **75** | **279** | **24** | **54** | **52** | **94** | **336** | **46** | **138** | **32** | **16** | **19** | **32** | **96** |